



ನಮ್ಮ ತಂಡ ಅದು ಹಾರಿ ಬಂದು ಕುಳಿತಾಗ ಕೌತುಕದಿಂದ ನೋಡಿ, ಥೇಟ್ ಪ್ರಜ್ವಲಿಸುವ ಉಲ್ಕೆಯಂತೆ ಕಂಡದ್ದರಿಂದ, ಅದರ ಉಜ್ವಲ ಬಣ್ಣಕ್ಕೆ ನಾವು ಹೌಹಾರಿದ್ದು.

ಇದು ತೀರಾ ಅಪರೂಪದ ಹಕ್ಕಿಯಾದ್ದರಿಂದ ತಂಡದಲ್ಲಿದ್ದವರೆಲ್ಲಾ ಫೋಟೊ ತೆಗೆದದ್ದೇ ತೆಗೆದದ್ದು. ಪ್ರತಿಯೊಬ್ಬರ ಬಾಯಿಯಲ್ಲೂ ಅಚ್ಚರಿಯ ಮಾತೇ. ಬರ್ಡ್ ಮ್ಯಾರಾಥಾನ್ ಗೆ ಬಂದದ್ದಕ್ಕೆ ಸಾರ್ಥಕವಾಯಿತು ಎಂದು ಕೆಲವರು. ಬಹಳ ನಾಚಿಕೆ ಸ್ವಭಾವದ ಈ ಹಕ್ಕಿ ಇಷ್ಟೆಲ್ಲಾ ಜನರ ಮುಂದೆ ಕನಿಷ್ಠ ಹತ್ತು ನಿಮಿಷವಾದರೂ ಕುಂತಲ್ಲೇ ಅಲುಗಾಡದೆ ಕುಳಿತದ್ದು ನಿಜಕ್ಕೂ ಪರಮಾಶ್ಚರ್ಯ. ಕಾಡಿನೊಳಗೆ ಈ ಹಕ್ಕಿಯನ್ನು ಕಾಣುವುದೇ ಒಂದು ದೊಡ್ಡ ಸವಾಲು. ಹಾಗಿರುವಾಗ ಇಷ್ಟೊಂದು ಆರಾಮವಾಗಿ ಕುಳಿತಿದ್ದರೆ ಖುಷಿಯಾಗದೆ ಇರುತ್ತದೆಯೆ?

ಎದೆಯಲ್ಲಿ ಪ್ರಧಾನವಾಗಿ  ಕೆಂಪು ಬಣ್ಣ ಇದ್ದರೂ ಈ ಹಕ್ಕಿಯ ಮೈಮೇಲೆ ಪ್ರಕೃತಿಯ ಎಲ್ಲಾ ಬಣ್ಣಗಳು ಸಂಯೋಜನೆಯಾದಂತೆ ಇರುತ್ತದೆ. ಅನೇಕ ಬಣ್ಣಗಳಿಂದ, ಬಣ್ಣದ ರಂಗೋಲಿಯಂತೆ ಕಂಗೊಳಿಸುವ ಪಶ್ಚಿಮ ಘಟ್ಟಗಳ ಅಪೂರ್ವ ಪಕ್ಷಿ ಇದು. ಗಿಡ್ಡವಾದ ಕತ್ತನ್ನು ಹೊಂದಿದ್ದು, ಹೆಚ್ಚಾಗಿ ಮೈಯನ್ನು



ಗೂನಿಸಿಕೊಂಡು ಕುಳಿತುಕೊಳ್ಳುತ್ತದೆ. ಕಣ್ಣಿನ ಸುತ್ತ ನಗ್ನ ಉಂಗುರವಿದೆ. ಚಿಕ್ಕದಾದ ಕೊಕ್ಕು ಮತ್ತು ಕಾಲುಗಳು. ರೆಕ್ಕೆಯು ಕಪ್ಪು ಮತ್ತು ಬಿಳಿಯ ಗೀರುಗಳಿಂದ ಕೂಡಿರುತ್ತದೆ. ಬೆನ್ನು ಹೊಂಬಣ್ಣ. ಹೊಟ್ಟೆಯ ಭಾಗ ಪ್ರಜ್ವಲಿಸುವ ರಕ್ತ ಕೆಂಪು, ಎದೆ ಮತ್ತು ತಲೆಯಲ್ಲಿ ನೀಲಿಗಪ್ಪು ಬಣ್ಣ. ಎದೆಯ ಕಪ್ಪು ಬಣ್ಣಕ್ಕೂ, ಹೊಟ್ಟೆಯ ಕೆಂಪು ಬಣ್ಣಕ್ಕೂ ನಡುವೆ ಬಿಳಿಯ ನೆಕ್ಲೆಸ್‌ನಂತಹ ಪಟ್ಟಿ ಇರುತ್ತದೆ.

ಹೆಣ್ಣು ಹಕ್ಕಿಗೆ ಇಷ್ಟೆಲ್ಲ ಬಣ್ಣಗಳಿರುವುದಿಲ್ಲ. ಮೈಯೆಲ್ಲಾ ಮಾಸಲು ಕಿತ್ತಳೆ ಕಂದು ಬಣ್ಣವಿರುತ್ತದೆ. ಮೆಲ್ಲಗೆ ಗೆಜ್ಜೆ ಅಲ್ಲಾಡಿಸಿದಂತೆ ಗಿಲಿಗಿಲಿ ಅಥವಾ ಚರಿಚಿರಿ ಎಂದು ಸಿಳ್ಳು ಹಾಕುತ್ತದೆ. ಇದರ ಕೂಗು 'ಕ್ಯೂ' ಇಲ್ಲವೇ 'ಮ್ಯೂ' ಎಂದು ಕೇಳಿಸುತ್ತದೆ. ಕಾಡಿನ ಹಸಿರು ಹಿನ್ನೆಲೆಯಲ್ಲಿ ಅದು ತದ್ವತ್ತಾಗಿ ರತ್ನಾಭರಣದಂತೆಯೇ ಪ್ರಜ್ವಲಿಸುತ್ತದೆ.

ಎಲ್ಲ  ಪ್ರಭೇದಗಳ ಟ್ರೋಜನ್ ಹಕ್ಕಿಗಳಲ್ಲೂ ಹೆಣ್ಣಿಗಿಂತ ಗಂಡು ವರ್ಣ ವೈವಿಧ್ಯದಲ್ಲಿ ಹೆಚ್ಚು ಆಕರ್ಷಕ. ದಟ್ಟ ಅರಣ್ಯದಲ್ಲಿ ಇವುಗಳ ವರ್ಣವೈವಿಧ್ಯ ಎದ್ದುಕಾಣದಿರಲು ಕಾರಣ ಇವು ಕುಳಿತುಕೊಳ್ಳುವ ಭಂಗಿ. ನಿಶ್ಚಲವಾಗಿ ಬಾಲದ ಪುಕ್ಕಗಳನ್ನು ಕೆಳಮುಖವಾಗಿ ನೆಟ್ಟಗೆ ಮಾಡಿಕೊಂಡು ಕುಳಿತು ಕೊಳ್ಳುವುದರಿಂದ ಬಣ್ಣಗಳು ಗೊತ್ತೇ ಆಗುವುದಿಲ್ಲ. ಹುಳ ಹುಪ್ಪಟೆಗಳನ್ನು ಕುಕ್ಕಲು ಹಾರಿ ಹೋಗುವಾಗಷ್ಟೇ ಬಣ್ಣಗಳು ಕಣ್ಣಿಗೆ ರಾಚುತ್ತವೆ. ಕೆಂಪು ಎದೆಯ, ಹಳದಿ ಬೆನ್ನಿನ ಇದರ ಬಣ್ಣಗಳು ಬೆಳಕನ್ನು ಪ್ರತಿಫಲಿಸುವ ಕಾರಣಕ್ಕಾಗಿ ಇದು ಸ್ವಯಂ ಪ್ರಭೆಯಿಂದ ಹೊಳೆಯುವ ಹಕ್ಕಿಯಂತೆ ಕಾಣುತ್ತದೆ.

ಜೋಡಿ ಹಕ್ಕಿಗಳು ಆಗೀಗ ಕೂಗುತ್ತ ಪರಸ್ಪರ ಸಂಭಾಷಣೆ ನಡೆಸುವುದರಿಂದಾಗಿ ಇವುಗಳು ನಮ್ಮ ಕಿವಿಗೇ ಹೆಚ್ಚು ಹತ್ತಿರ. ಇವು ಗುಂಪಿನಲ್ಲಿ ಬದುಕುವ ಹಕ್ಕಿಗಳಲ್ಲ. ಬರಿ ಹೆಣ್ಣು– ಗಂಡು ಜೋಡಿಯಾಗಿ ವಾಸಿಸುತ್ತವೆ. ಹಕ್ಕಿಯ ಪೋಷಾಕು ಕಂಡು ಹಿಂದಿಯಲ್ಲಿ ಇದನ್ನು 'ಕಫಣೆ ಚೂಡಿ' ಎಂದಿದ್ದಾರೆ. ಬಹುಶಃ ಅವರಿಗೆ ಫಕೀರರು ಧರಿಸುವ ಕಫನ್ ನಂತೆ ಕಂಡಿರಬೇಕು.

ಬಹುಪಾಲು ಇದನ್ನೇ ಹೋಲುವ ಇನ್ನೆರಡು ಪ್ರಭೇದದ ಹಕ್ಕಿಗಳು ಭಾರತದ ಹಿಮಾಲಯದ ಕಾಡುಗಳಲ್ಲಿ ಇವೆ. ದಟ್ಟ ಕಾಡುಗಳಲ್ಲಿ ಮನುಷ್ಯನ ಸುಳಿವು ಇಲ್ಲದೆ ಕಡೆ ಬದುಕುವ ಇವು ವರ್ಷಕ್ಕೆ 2 ರಿಂದ 4 ಮೊಟ್ಟೆ ಇಟ್ಟು, ಫೆಬ್ರುವರಿಯಿಂದ ಜೂನ್ ತಿಂಗಳವರೆಗೆ ಸಂತಾನಾಭಿವೃದ್ಧಿ ಮಾಡುತ್ತವೆ. ಗೂಡಿಗಾಗಿ ಒಣಗಿ ಪೊಳ್ಳಾಗಿರುವ ಮರಗಳನ್ನು ಹುಡುಕಿ, ಪೊಟರೆ ಕೊರೆದು ಗೂಡು ಮಾಡುತ್ತವೆ.

ಟ್ರೋಜನ್ ಹಕ್ಕಿಗಳು  ಶರೀರ ರಚನೆಯಲ್ಲಿ ಬೇರೆ ಯಾವ ಪ್ರಭೇದದ ಹಕ್ಕಿಗಳನ್ನೂ ಹೋಲುವುದಿಲ್ಲ. ಅದಕ್ಕೆಂದೇ ಇವುಗಳನ್ನು 'ಟ್ರೋಗೋಣಿ ಫಾರ್ಮ್' ಎಂದು ವಿಶಿಷ್ಟ ಬಳಗವನ್ನಾಗಿ ಗುರುತಿಸಿದ್ದಾರೆ. ಈ ಹಕ್ಕಿಯ ವೈಜ್ಞಾನಿಕ ಹೆಸರು **Harpactes fasciatus.** ಇವುಗಳಲ್ಲಿ ಎಂಟು ಪ್ರಧಾನ ಪ್ರಭೇದಗಳು ಇದ್ದು, 34 ಒಳಪ್ರಭೇದಗಳಿವೆ. ಕನ್ನಡದಲ್ಲಿ ಕಾಕರಣೆ ಹಕ್ಕಿ ಎನ್ನುತ್ತಾರೆ.